# ದಕ್ಷಿಣ ಕನ್ನಡ ನಿರ್ಮಿತಿ ಕೇಂದ್ರ

## ನಿಮ್ಮ ಕನಸಿನ ಮನೆ

**ನಾವು ಕಟ್ಟುವೆವು**

ಬಲಿಷ್ಠ

ಸುಂದರ

ಮಿತವ್ಯಯಕಾರಿ

ಪರಿಸರ ಸ್ನೇಹಿ

ವಿಶಾಲವಾದ ಮತ್ತು ಆರಾಮದಾಯಕ



Scanned by CamScanner

ದಕ್ಷಿಣ ಕನ್ನಡ ನಿರ್ಮಿತಿ ಕೇಂದ್ರವು ಮಿತವ್ಯಯ ನಿರ್ಮಾಣ ತಾಂತ್ರಿಕತೆಗೆ ಹೆಸರುವಾಸಿಯಾಗಿದ್ದು, ಒಂದೇ ಸೂರಿನಡಿ ಕಟ್ಟಡಗಳ ವಿನ್ಯಾಸ, ಯೋಜನೆ, ಅಂದಾಜು ಪಟ್ಟಿ ಹಾಗೂ ಕಟ್ಟಡ ನಿರ್ಮಾಣವನ್ನು ನಡೆಸಿ ಕೊಡುತ್ತದೆ.

ನಾವು ಸೂಕ್ತ ತಂತ್ರಜ್ಞಾನದ ಮೂಲಕ ಪರಿಸರ ಸ್ನೇಹಿ, ಕಡಿಮೆ ವೆಚ್ಚದ, ಬಲಿಷ್ಠ ಮತ್ತು ಆಕರ್ಷಕ ವಿನ್ಯಾಸದ ಗೃಹಗಳನ್ನು ನಿರ್ಮಿಸುತ್ತೇವೆ. ನಾವು ನಿರ್ಮಿಸುವ ಮನೆಗಳು ಎಲ್ಲಾ ತರಹದ ವಾತಾವರಣಕ್ಕೆ ಹೊಂದಿಕೊಂಡಿರುತ್ತದೆ. ಗುಣಮಟ್ಟ ಹಾಗೂ ಕ್ಷಮತೆಯಲ್ಲಿ ಯಾವುದೇ ರಾಜಿ ಇಲ್ಲ.

## ವಿಶೇಷ ಅಂಶಗಳು . . . .

**ಇಟ್ಟಿಗೆ ಕಮಾನುಗಳು** : ಸ್ಟೀಲು ಮತ್ತು ಕಾಂಕ್ರೀಟಿನ ಉಳಿಕೆ, ವೆಚ್ಚದಲ್ಲಿ ಕಡಿತ ಮತ್ತು ಕಟ್ಟಡಕ್ಕೆ ಆಕರ್ಷಕ ನೋಟ.

**ಫಿಲ್ಲರ್ ಸ್ಲ್ಯಾಬ್** : ಪರಿಣಾಮಕಾರಿಯಾಗಿ ತಂಪೀಯುವ, ಸೌಂದರ್ಯಯುಕ್ತವಾದ, ಸ್ಥಿರ ಹಾಗೂ ಬಲಿಷ್ಠವಾದ, ಕಡಿಮೆ ವೆಚ್ಚದಲ್ಲಿ ಸುಖಾನುಭವ ನೀಡುವ ಫಿಲ್ಲರ್ ಸ್ಲ್ಯಾಬ್.

**ಫೆರೋ ಸಿಮೆಂಟ್ ರೂಫಿಂಗ್** : ವಿವಿಧ ಆಕಾರಗಳಲ್ಲಿ ಲಭ್ಯವಿರುವ ಫೆರೋ ಸಿಮೆಂಟ್ ರೂಫಿಂಗ್‌ಗಳು (ಛಾವಣಿ), ಆಂತರಿಕ ಅಲಂಕಾರಿಕೆಗಳು ನಿರ್ಮಾಣ ಅವಧಿ ಹಾಗೂ ವೆಚ್ಚವನ್ನು ಕಡಿತಗೊಳಿಸುತ್ತವೆ.

ಗಾರೆ ರಹಿತ ಕೆಂಪುಕಲ್ಲು ಸೌಂದರ್ಯ ಹಾಗೂ ಪರಿಸರ ಸಹ್ಯತೆಯನ್ನು ಒದಗಿಸುತ್ತವೆ.

**ಪರಿಸರ ಪ್ರಿಯ** : ನಾವು ಕಟ್ಟಡ ವಿನ್ಯಾಸ ಮಾಡುವಾಗ ಪರಿಸರದ ವಾತಾವರಣವನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ. ಇಡೀ ಕಟ್ಟಡ ರಚನೆಯ ವಿನ್ಯಾಸವು ಸ್ಥಳ, ವಾತಾವರಣ ಹಾಗೂ ಗ್ರಾಹಕನ ವಾಸ ಶೈಲಿಗೆ ಅನುಗುಣವಾಗಿ ಇರುವುದು.

**ಸಂಶೋಧನೆ ಮತ್ತು ಅಭಿವೃದ್ಧಿ** : ಕಟ್ಟಡ ನಿರ್ಮಾಣ ತಂತ್ರಜ್ಞಾನದ ಅಭಿವೃದ್ಧಿ, ನೂತನ ಸಾಮಗ್ರಿಗಳ ಆವಿಷ್ಕಾರ ಹಾಗೂ ಅಭಿವೃದ್ಧಿ ಮತ್ತು HUDCO, KARNIK, RGRHCL, NITK, ಸುರತ್ಕಲ್‌ಗಳ ತಾಂತ್ರಿಕ ಸಲಹೆಗಳು ನಮ್ಮ ಇತರ ವಿಶೇಷತೆಗಳು.









Scanned by CamScanner

## ನಿರ್ಮಿತಿ ಕೇಂದ್ರದಲ್ಲಿ ಲಭ್ಯವಿರುವ ಉತ್ಪನ್ನಗಳು . . . .

- ಕಾಂಕ್ರೀಟ್ ಇಟ್ಟಿಗೆ
- ಪೇವಿಂಗ್ ಬ್ಲಾಕ್ಸ್
- PRECAST ಮೆಟ್ಟಿಲುಗಳು
- ಅಡುಗೆ ಮನೆಯ ಹಲಗೆಗಳು
- RCC ದಾರಂದ
- RCC ಕಿಟಕಿ ಫ್ರೇಮ್
- RCC ಪಕ್ಕಾಸುಗಳು
- ಕಾಂಕ್ರೀಟ್ ರೀಪರ್ಸ್
- ಫಿನಿಕ್ಯುಲರ್ ಶೆಲ್ಸ್
- ಕಾಂಕ್ರೀಟ್ ರ್‍ಯಾಫ್ಟರ್ಸ್
- ಕರ್ಬ್‌ಸ್ಟೋನ್
- ಆವರಣ ಗೋಡೆಯ ವಿನ್ಯಾಸಗಳು
- ಫೆರೋಸಿಮೆಂಟ್ ಉಪಕರಣಗಳು



**ಗ್ರಾಹಕರ ಆಯ್ಕೆಗೆ ಅನುಗುಣವಾಗಿ ಉತ್ಪಾದನವನ್ನು ತಯಾರಿಸಿ ಕೊಡಲಾಗುವುದು**

### ವಾತಾವರಣದೊಂದಿಗೆ ಹೆಜ್ಜೆ ಹಾಕುತ್ತಾ

ಮುಂಗಾರಿನ ಅವಧಿಯಲ್ಲಿ, ಮಳೆಯ ವಾರ್ಷಿಕ ಸರಾಸರಿಯು 4500mm ಆಗಿರುತ್ತದೆ. ಬೇಸಿಗೆಕಾಲದ ಉಷ್ಣತೆಯು 36°c ನಿಂದ 40°c ಆಗಿದ್ದು, ತೇವಾಂಶವು 70% ರಿಂದ 90% ರಷ್ಟಿದೆ. ಕಟ್ಟಡ ನಿರ್ಮಾಣದಲ್ಲಿ ಇದಕ್ಕೆ ಸೂಕ್ತವಾದ ತಾಂತ್ರಿಕತೆಯನ್ನು ಅಳವಡಿಸಬೇಕಾಗಿದೆ. ಗಾರೆ ರಹಿತ ಕಟ್ಟಡ ಹೊರಭಾಗ/Ratictrap Bondನ ಗೋಡೆ, ಸರಿಯಾದ ವೆಂಟಿಲೇಶನ್, ಕಮಾನುಗಳು, ಫಿಲ್ಲರ್ ಸ್ಲ್ಯಾಬ್ ಮಾಡುಗಳು, ಸ್ಟೀಲು ಮತ್ತು ಮರ ರಹಿತ ರಚನೆ–ಮುಂತಾದುವು ಸ್ಥಳೀಯ ಹವೆಗೆ ಅತ್ಯಂತ ಸೂಕ್ತವಾದವುಗಳು. ನಿರ್ಮಿತಿ ಕೇಂದ್ರವು ವಾತಾವರಣವು ಸೂಕ್ತವಾದ ಕಟ್ಟಡ ರಚನಾ ತಾಂತ್ರಿಕತೆಯನ್ನು ಎರಡುವರೆ ದಶಕದಿಂದ ಅಳವಡಿಸುವ ವಿಧಾನವನ್ನು ಪರಿಚಯಿಸುತ್ತಾ ಇದೆ.


E-mail :
dknirmithi@yahoo.com

Web. :
www.dknk.org




Scanned by CamScanner

## ದಕ್ಷಿಣ ಕನ್ನಡ ನಿರ್ಮಿತಿ ಕೇಂದ್ರ

### ರಾಷ್ಟ್ರಪ್ರಶಸ್ತಿ ವಿಜೇತ ಸಂಸ್ಥೆ



ದಕ್ಷಿಣ ಕನ್ನಡ ನಿರ್ಮಿತಿ ಕೇಂದ್ರವು 1990ರ ಜನವರಿ 5 ರಂದು ಕೇಂದ್ರ ಸರಕಾರದ 'ನ್ಯಾಷನಲ್ ನೆಟ್‌ವರ್ಕ್ ಆಫ್ ಬಿಲ್ಡಿಂಗ್ ಸೆಂಟರ್ಸ್ ಇನ್ ಇಂಡಿಯಾ' ಯೋಜನೆಯಡಿ ಸ್ಥಾಪಿತವಾಯಿತು. ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕದ ಕ್ಯಾಂಪಸ್‌ನಲ್ಲಿರುವ ಈ ಕೇಂದ್ರವು 'Societies Act 1960' ರನ್ವಯ ನೋಂದಣಿಯಾಗಿದೆ. ಕರಾವಳಿ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಕಾರ್ಯಗಳಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿರುವ ಈ ಕೇಂದ್ರಕ್ಕೆ, ಸಾರ್ವಜನಿಕರ ಬೇಡಿಕೆಗಳಿಗನುಗುಣವಾಗಿ ಎಲ್ಲಾ ಸೌಕರ್ಯಗಳು ಹಾಗೂ ಕೌಶಲ್ಯಗಳನ್ನು ಹೊಂದಿದೆ.

**ನಿರ್ಮಿತಿ ಕೇಂದ್ರದ ಕಾರ್ಯ ಚಟುವಟಿಕೆಗಳು :**

- ನಿರ್ಮಾಣ ಕಾರ್ಯಾಚರಣೆಗಳಿಗೆ ತರಬೇತಿ, ಕೌಶಲ್ಯ ವರ್ಧನೆ
- ಕಡಿಮೆ ವೆಚ್ಚದ ನಿರ್ಮಾಣ ಸಾಮಗ್ರಿಗಳ ತಯಾರಿಕೆ
- ಸೂಕ್ತ ನಿರ್ಮಾಣ ವಿಧಾನದ ಮೂಲಕ ಸಾರ್ವಜನಿಕ, ಖಾಸಗಿ ಹಾಗೂ ಸರ್ಕಾರಿ ಕಟ್ಟಡಗಳ ನಿರ್ಮಾಣ
- ತಿಳುವಳಿಕೆ ಶಿಬಿರಗಳ ಮೂಲಕ ತಾಂತ್ರಿಕ ಜ್ಞಾನದ ಪ್ರಸರಣೆ, ಪ್ರದರ್ಶನ, ಸೆಮಿನಾರ್, ಓರಿಯೆಂಟೇಶನ್ ಕಾರ್ಯಕ್ರಮ, ಅತಿಥಿ ಉಪನ್ಯಾಸ ಮುಂತಾದ ಕಾರ್ಯಕ್ರಮಗಳು.

2001–2002 ರಂದು, ದ.ಕ. ನಿರ್ಮಿತಿಕೇಂದ್ರದ ಕಾರ್ಯಕ್ರಮಗಳು ಹಾಗೂ ಕ್ಷಮತೆಯನ್ನು ಗಮನಿಸಿ, ಹುಡ್ಕೋ ಸಂಸ್ಥೆಯು, ಕಟ್ಟಡ ನಿರ್ಮಾಣ ನಿಮಿತ್ತದ ರಾಷ್ಟ್ರೀಯ ಪುರಸ್ಕಾರ ನೀಡಿ ಗೌರವಿಸಿದೆ. ನಿರ್ಮಿತಿ ಕೇಂದ್ರವು ಎಪ್ರಿಲ್ 24, 2002 ರಂದು ದೆಹಲಿ ಹ್ಯಾಬಿಟೈಟ್ ಸೆಂಟರ್‌ನಲ್ಲಿ ಹುಡ್ಕೋ ವಾರ್ಷಿಕ ದಿನಾಚರಣೆಯಂದು ಈ ಪ್ರಶಸ್ತಿಯನ್ನು ಪಡೆಯಿತು.

- ಆಕಾಶವಾಣಿಯಲ್ಲಿ ಭಾಷಣ/ಮಾಹಿತಿ ವಿನಿಮಯ
- ಸ್ಥಳೀಯ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಉಪನ್ಯಾಸ ಸರಣಿ
- ವಿದ್ಯಾರ್ಥಿಗಳಿಗೆ ಉಚಿತ Project Workಗೆ ಅವಕಾಶ - ಸಹಕಾರ - ಮಾರ್ಗದರ್ಶನ
- ೬೦೦ ಚ. ಅಡಿ ಕಡಿಮೆ ಮನೆ ನಿರ್ಮಿಸುವವರಿಗೆ ಉಚಿತ ಮಾರ್ಗದರ್ಶನ
- ಗ್ರಾಹಕರ ಇಚ್ಛಾನುಸಾರ ಉತ್ಪನ್ನಗಳ ವಿನ್ಯಾಸ/ಉತ್ಪಾದನೆ ಮತ್ತು ಸರಬರಾಜು

| ಅಧ್ಯಕ್ಷರು | ಕಾರ್ಯಾಧ್ಯಕ್ಷರು | ಯೋಜನಾ ನಿರ್ದೇಶಕರು |
|---|---|---|
| ಎ.ಬಿ. ಇಬ್ರಾಹಿಂ, IAS | ಶ್ರೀಮತಿ ತುಳಸಿ ಮದ್ದಿನೇನಿ, IAS | ರಾಜೇಂದ್ರ ಕಲ್ಬಾವಿ |
| ಜಿಲ್ಲಾಧಿಕಾರಿ | ಮುಖ್ಯ ಕಾರ್ಯನಿರ್ವಹಣಾಧಿಕಾರಿ | B.E., M.Tech. |
| ದ.ಕ. ಜಿಲ್ಲೆ, ಮಂಗಳೂರು | ದ.ಕ. ಜಿಲ್ಲಾ ಪಂಚಾಯತ್, ಮಂಗಳೂರು | |


**ದಕ್ಷಿಣ ಕನ್ನಡ ನಿರ್ಮಿತಿ ಕೇಂದ್ರ**

ಎನ್.ಐ.ಟಿ.ಕೆ. ಕ್ಯಾಂಪಸ್

ಶ್ರೀನಿವಾಸ ನಗರ,

ಸುರತ್ಕಲ್ - ೫೭೫ ೦೨೫

Telefax : 0824 - 2476727

E-mail : dknirmithi@yahoo.com

Web. : www.dknk.org




Scanned by CamScanner